

ಜುಲೈ 1ರಂದು ನಮ್ಮ ರೋಟರಿ ಕ್ಲಬ್‌ನ ಪರವಾಗಿ, ಸಮಾಜಕ್ಕೆ ಸಲ್ಲಿಸಿದ ಅವರ ಸಮರ್ಪಿತ ಸೇವೆಯನ್ನು ಗುರುತಿಸಿ, ನಮ್ಮ ಗೌರವಾನ್ವಿತ ವೈದ್ಯ ದಂಪತಿಗಳಾದ ಪಿಡಿಜಿ. ರೊ. ಡಾ|| ಆರ್.ಡಿ. ಪ್ರಭು ಮತ್ತು ರೊ. ಡಾ|| ಉಷಾ ಪ್ರಭು ಅವರನ್ನು ಗೌರವಿಸುವ ಮೂಲಕ ವೈದ್ಯರ ದಿನವನ್ನು ಆಚರಿಸಲಾಯಿತು. ಈ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿದ್ದು, ವೈದ್ಯ ಸಮುದಾಯ ಉದಾತ್ತ ಸೇವೆ ಮತ್ತು ಬದ್ಧತೆಯನ್ನು ಆಚರಿಸುವ ಮೂಲಕ ನಮ್ಮ ರೋಟರಿ ವರ್ಷದ ಅರ್ಥಪೂರ್ಣ ಆರಂಭವಾಯಿತು.



ರೊ. ನರೇಂದ್ರರವರನ್ನು ಅವರ ನಿವಾಸದಲ್ಲಿ ಕುಟುಂಬದ ಸದಸ್ಯರ ಸಮ್ಮುಖದಲ್ಲಿ ಪುರಸ್ಕರಿಸಿ, ಚಾರ್ಟರ್ಡ್ ಅಕೌಂಟೆಂಟ್ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.



ತಾಯಿ ಮತ್ತು ಮಕ್ಕಳ ಆರೋಗ್ಯ ಮಾಸದ ಅಂಗವಾಗಿ ಪೌಷ್ಠಿಕ ಆಹಾರ ವಿತರಣೆ ದಿನಾಂಕ 5-7-2026ರಂದು ಬೆಳಿಗ್ಗೆ 11.00 ಗಂಟೆಗೆ, ಶಿವಮೊಗ್ಗ ಮೆಗ್ಗಾನ್ ಒಬಿಟಿ ವಿಭಾಗದಲ್ಲಿ ಗರ್ಭಿಣಿಯರಿಗೆ ಪೌಷ್ಠಿಕ ಆಹಾರ ವಿತರಣೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಸಿಲಾಯಿತು. ಈ ಕಾರ್ಯಕ್ರಮದಲ್ಲಿ ಕ್ಲಬ್ಬಿನ ಅಧ್ಯಕ್ಷರಾದ ರೊ. ಶ್ರೀಧರ ಎಸ್., ಕಾರ್ಯದರ್ಶಿ ರೊ. ಉಜ್ವಲ ಬಿ.ಎಸ್., ಕ್ಲಬ್ ಲರ್ನಿಂಗ್ ಫೆಸಿಲಿಟೇಟರ್ ರೊ. ರಾಜೇಂದ್ರ ಪ್ರಸಾದ್ ಎಂ.ಆರ್., ಸಮುದಾಯ ಸೇವಾ ನಿರ್ದೇಶಕರಾದ ರೊ. ಆರ್.ಎನ್. ಮಂಜನಾಥ್, ವೃತ್ತಿ ಸೇವಾ ನಿರ್ದೇಶಕರಾದ ರೊ. ಅಮರ್ ಬೆಳಗೂರ್ ಅವರುಗಳು ಉಪಸ್ಥಿತರಿದ್ದರು. ಅದೇ ರೀತಿ ನಮ್ಮ ಕ್ಲಬ್ಬಿನ ನೂತನ ಸದಸ್ಯರಾದಿ ಖ್ಯಾತ ಹೃದ್ರೋಗ ತಜ್ಞ ಡಾ|| ಪರಮೇಶ್ವರ್ ಹಾಗೂ ರೊ. ಸಿದ್ದೋಜಿ ಅವರು ಹಾಜರಿದ್ದರು.





ದಿನಾಂಕ 4-7-2027ರಂದು ಸೇವೆ ಅಡಿಯಲ್ಲಿ 300 ಪ್ರೋಟೀನ್ ಪೌಡರ್ ಯುನಿಟ್‌ಗಳನ್ನು ಹೆರಿಗೆ ನಂತರದ ಉಪಚಾರವಾಗಿ 300 ತಾಯಂದಿರಿಗೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ರೊ. ಶ್ರೀಧರ ಎಸ್, ಕಾರ್ಯದರ್ಶಿ ರೊ. ಉಜ್ವಲ ಬಿ.ಆರ್., ರೊ. ಆರ್.ಎನ್. ಮಂಜುನಾಥ್, ರೊ. ಡಾ|| ವಿಶ್ವಮೂರ್ತಿ, ರೊ. ಡಾ|| ಇರ್ಫಾನ್ ಅಹಮದ್ ಮುಂತಾದವರು ಭಾಗವಹಿಸಿದ್ದರು.

Dear Rotarians,

Please make up your attendance, by attending the following Rotary Club Meeting at Shimoga.

| | |
|---|---|
| ROTARY CLUB SHIMOGA | |
| Wednesday, Rotary Youth Centre, Savalanga Road | 6.45 p.m. |
| ROTARY CLUB SHIMOGA EAST | |
| Friday, Rotary School | 7.00 p.m. |
| ROTARY CLUB SHIMOGA CENTRAL | |
| Tuesday, IMA Hall | 8.00 p.m. |
| ROTARY CLUB SHIMOGA NORTH | |
| Tuesday, North Bhavan, Gadikoppa | 7.00 p.m. |
| ROTARY CLUB SHIMOGA RIVERSIDE | |
| Wednesday, Riverside Bhavan | 8.00 p.m. |
| ROTARY CLUB SHIMOGA JUBILEE | |
| Saturday, Rotary Youth Centre | 8.30 a.m. |
| ROTARY CLUB SHIMOGA MALNAD | |
| Friday, Friend Center Hall, Opp. Vishal Mart, Gopala | 6.30 p.m. |
| SHIMOGA SAHYADRI ROTARY CLUB | |
| Wednesday, Shivanagara Temple Community Hall 1st cross, Vidyanagara | 7.00 p.m. |

**ROTARIAN BIRTHDAY** *Greetings to*

| | |
|---|---|
| Rtn. Veena Suresh | Jul-05 |
| Rtn. Rajesh S.V. | Jul-07 |
| Rtn. Murali M. | Jul-08 |

**MARRIAGE ANNIVERSARY** *Greetings to*

Rtn. N.S. Rangarajan Jul-09
Ann. Annapoorna

Printed at : A.S.R. Offset Printers, #4, Dargah Complex, Tilak Nagar Main Road, SHIMOGA-577201, Ph : 278764

Rotary 2026-27
ಮಿಡ್‌ಟೌನ್ ನ್ಯೂಸ್
Midtown News
Club No 21853 | Charter Date : 16.05.1984 | Zone : 10 | R.I Dist. 3182
In House Bulletin of Rotary Club Shimoga Mid Town
ಟೀಂ ಸ್ಪಂದನ : 2026-27 | TEAM SPANDANA : 2026-27
R.I. President : Rtn. Olayinka H. Babalola
Dist. Governor : Rtn. B.M. Bhat
Asst. Governor : Rtn. Teerthaiah K.H.
President : Rtn. Dr. Sridhara S.
Secretary : Rtn. Ujwala B.S.
Director : Rtn. Dr. Ramesh R.
Editor : Rtn. Meera Nadig
Members : Rtn. Anand I.R., Rtn. Preethi Deepak, Rtn. Shilpa H.G., Rtn. K.V.L. Raju
We meet every Thursday at Rotary Midtown Hall, SHIVAMOGGA-577201
rotaryshimogamidtown@gmail.com
Vol. 43 9 - 7 - 2026 ISSUE 2

## Maternal and Child Health Month

### ದಿನಾಂಕ 2-7-2026ರ ವಾರದ ಸಭೆಯ ವರದಿ

ಸಭೆಯ ಆರಂಭಕ್ಕೂ ಮುನ್ನ ನಮ್ಮ ಕ್ಲಬ್ಬಿನ ಸದಸ್ಯರಾದ ರೊ. ಅಕ್ಷತಾ ಓಕಾಡೆ ಇವರಿಂದ ವಿಷ್ಣು ಅವತಾರ ಭರತನಾಟ್ಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ರೊ. ಜಿ.ಎನ್.ಎನ್. ಮೂರ್ತಿ ಇವರು ಕ್ಲಬ್ ನಡೆದು ಬಂದ ಹಾದಿಯನ್ನು ತಿಳಿಸುತ್ತಾ, ಶೂನ್ಯತೆಯಿಂದ ಮಾನ್ಯತೆಯವರೆಗೆ ಶ್ರಮಿಸುವ, ಕ್ರಮಿಸುವ ದಾರಿ ಹತ್ತು ಹಲವು ಪರಿಶ್ರಮಗಳನ್ನು ಬೇಡುತ್ತದೆ. ಅಂತೆಯೇ ಸಾಧನೆ ಎಂದಿಗೂ ಪರಿಶ್ರಮವನ್ನು ಬೇಡುವುದರೊಂದಿಗೆ, ಹೊಸ ಹರವುಗಳೊಂದಿಗೆ ಹೊಸ ದೃಷ್ಟಿಕೋನಗಳನ್ನು ಹುಟ್ಟಿಹಾಕುತ್ತದೆ. ಸಮಯ ಸೇವೆಯ ಹಸಿವಿನೊಂದಿಗೆ ಅಂತರರಾಷ್ಟ್ರೀಯ ಸಂಸ್ಥೆಯೊಂದರ ನೆರಳಿನಲ್ಲಿ ಒಟ್ಟಾದ ಹಲವು ಸಮಾನ ಮನಸ್ಕರ ಸಣ್ಣಪುಟ್ಟ



ಆಶೋತ್ತರಗಳು ಹಲವು ಬಣ್ಣಗಳಿಂದ ಮಿನುಗುತ್ತ ದಿನಗಳೆದಂತೆ ಸಾಧನೆಗಳ ಸರಮಾಲೆಯನ್ನೇ ಪೋಣಿಸಿದ ಯಶೋಗಾಥೆಯೇ ರೋಟರಿ ಮಿಡ್‌ಟೌನ್ ಸಂಸ್ಥೆಯ ಈ 43ರ ಸಂಭ್ರಮ. ಇಂತಹ ಸುಂದರ ಸ್ವರೂಪ ಪಡೆದ 43ರ ಸದೃಢ ಸಂಸ್ಥೆ ಮಿಡ್‌ಟೌನ್ ರೋಟರಿ ಇಂದು ಇಡೀ ರೋಟರಿ ಜಿಲ್ಲೆಯಲ್ಲಿ ಮುಕುಟ ಪ್ರಾಯವಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ ಎಂದು ತಿಳಿಸಿದರು.

ನಂತರ ಅಧ್ಯಕ್ಷರಾದ ರೊ. ಹರ್ಷ ಬಿ. ಕಾಮತ್‌ರವರು ಸಭೆಯನ್ನು ಆರಂಭಿಸಿದರು. ಮೊದಲಿಗೆ ಆ್ಯನ್ ವಿದ್ಯಾ ಮಂಜುನಾಥ್‌ರವರ ಸುಶ್ರಾವ್ಯವಾದ ಪ್ರಾರ್ಥನೆಯೊಂದಿಗೆ ಚಾಲನೆ ನೀಡಲಾಯಿತು. ರೊ. ಹರ್ಷ ಬಿ. ಕಾಮತ್‌ರವರು ಸಭೆಗೆ ಸ್ವಾಗತವನ್ನು ಕೋರಿ ಇಂದಿನ ಕಾರ್ಯಕ್ರಮಕ್ಕೆ ಪದಗ್ರಹಣಾಧಿಕಾರಿಯಾಗಿ ಆಗಮಿಸಿದ್ದ ಡಿಜಿಎನ್ ರೊ. ವಸಂತ ಹೋಬ್ಳಿದರ್, ಮುಖ್ಯ ಅತಿಥಿಗಳಾದ ಪಿಡಿಜಿ ರೊ. ಡಾ|| ಪಿ. ನಾರಾಯಣ್, ವಲಯ 10ರ ಅಸಿಸ್ಟೆಂಟ್ ಗವರ್ನರ್‌ರಾದ ರೊ. ತೀರ್ಥಯ್ಯ ಕೆ.ಹೆಚ್., ಝೋನಲ್ ಲೆಫ್ಟಿನೆಂಟ್ ರೊ. ಎನ್.ವಿ. ಭಟ್‌ರವರನ್ನು ವೇದಿಕೆಗೆ ಆಹ್ವಾನವನ್ನು ನೀಡಿದರು.

ನಂತರದಲ್ಲಿ ವೇದ ಘೋಷಣೆಯೊಂದಿಗೆ ಎಲ್ಲಾ ಆಹ್ವಾನಿತ ಗಣ್ಯರು ದೀಪ ಬೆಳಗಿಸಿ ಸಮಾರಂಭವನ್ನು ಉದ್ಘಾಟಿಸಿದರು. ರೊ. ಶಿಲ್ಪಾ ಹೆಚ್.ಜಿ. ಇವರು ರೋಟರಿ ಮಿಡ್‌ಟೌನ್‌ನ ಪದಗ್ರಹಣ ಸಮಾರಂಭಕ್ಕೆ ಶುಭ ಕೋರಿದ ಎಲ್ಲಾ ಮಾನ್ಯರ ಶುಭಾಶಯಗಳ ವರದಿ ನೀಡಿದರು.

ಜುಲೈ ತಿಂಗಳಲ್ಲಿ ಹುಟ್ಟು ಹಬ್ಬ ಹಾಗೂ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡ ರೋಟರಿ ಸದಸ್ಯರಿಗೆ ರೊ. ಶ್ವೇತಾ ಆಚಾರ್ಯರವರು ಶುಭ ಹಾರೈಸಿದರು.

ನಿಕಟ ಪೂರ್ವ ಕಾರ್ಯದರ್ಶಿಗಳಾದ ರೊ. ಆರ್.ಎನ್. ಮಂಜುನಾಥ್ ರವರು 2025-26ನೇ ಸಾಲಿನ ವಾರ್ಷಿಕ ವರದಿ ಮಂಡಿಸಿದರು. ನಂತರ ರೊ. ಹರ್ಷ ಕಾಮತ್‌ರವರು ತಮ್ಮ 2025-26ನೇ ಸಾಲಿನ ನಡೆಸಿದ ಕಾರ್ಯಕ್ರಮಗಳು ಹಾಗು ಯೋಜನೆಗಳ ಬಗ್ಗೆ ಹೇಳುತ್ತಾ ಈ 365 ದಿನಗಳಲ್ಲಿ ನಡೆದ 365 ಕಾರ್ಯಯೋಜನೆಗಳು ಎಲ್ಲಾ ಸಮಾಜಮುಖಿ ಸಂಘ ಸಂಸ್ಥೆ ಹಾಗೂ ಎಲ್ಲಾ ಮಿಡ್‌ಟೌನ್ ಸದಸ್ಯರ ಸಹಭಾಗಿತ್ವವೆ ಕಾರಣ ಎಂದು ತಮ್ಮ ಭಾಷಣದಲ್ಲಿ ಹೇಳಿದರು.

ತದನಂತರ ರೊ. ಅನಿಲ್ ಪಿ. ಶೆಟ್ಟಿ ಇವರು ನೂತನವಾಗಿ 2026-27ನೇ ಸಾಲಿಗೆ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲಿರುವ ರೊ. ಡಾ|| ಶ್ರೀಧರ ಎಸ್. ರವರ ಸಂಕ್ಷಿಪ್ತ ಪರಿಚಯ ಸಭೆಗೆ ಮಾಡಿಕೊಟ್ಟರು.

ಇಂದಿನ ಕಾರ್ಯಕ್ರಮದ ಮುಖ್ಯ ಘಟ್ಟವಾದ ಪದಗ್ರಹಣಾಧಿಕಾರಿ ರೊ. ವಸಂತ್ ಹೋಬ್ಳಿದರ್‌ರವರು 2026-27ರ ಅಧ್ಯಕ್ಷ ಪದವಿಯನ್ನು ರೊ. ಡಾ|| ಶ್ರೀಧರರವರಿಗೆ ಹಸ್ತಾಂತರಿಸಿ ಶುಭ ಕೋರಿದರು.



ನೂತನ ಅಧ್ಯಕ್ಷ ರೊ. ಡಾ|| ಶ್ರೀಧರರವರು ತಮ್ಮ ನೂತನ ಸ್ಪಂದನ ತಂಡದ ಪದಾಧಿಕಾರಿಗಳು ಮತ್ತು ಛೇರ್‌ಮನ್‌ಗಳನ್ನು ವೇದಿಕೆಗೆ ಆಹ್ವಾನಿಸಿ ಪದಗ್ರಹಣಾಧಿಕಾರಿಗಳ ಮುಖೇನ ರೋಟರಿ ಪಿನ್ ತೊಡಿಸುವುದರ ಮೂಲಕ

## ವಾರದ ಸಭೆ

ದಿನಾಂಕ : **9-7-2026, ಗುರುವಾರ**
ಸಮಯ : **ಸಂಜೆ 7.30ಕ್ಕೆ**
ವಿಷಯ : **ಕ್ಲಬ್ ಅಫೇರ್ಸ್**

ಸ್ವಾಗತಿಸಿದರು.

ನೂತನ ಅಧ್ಯಕ್ಷ ರೊ. ಡಾ॥ ಶ್ರೀಧರರವರು ಅಧ್ಯಕ್ಷೀಯ ಸ್ವೀಕಾರ ಭಾಷಣದಲ್ಲಿ ಮುಂದಿನ ದಿನಗಳಲ್ಲಿ ತಮ್ಮ ದೃಷ್ಟಿಕೋನ ಹಾಗು ಗುರಿಗಳ ಬಗ್ಗೆ ಮಾತನಾಡುತ್ತಾ, ರೋಟರಿಯ ಧ್ಯೇಯ ವಾಕ್ಯವಾದ ಸೇವೆಯೇ ಶ್ರೇಷ್ಟ ಎಂಬ ಸಂದೇಶದ ಮಹತ್ವವನ್ನು ವಿವರಿಸಿ, ಸಮಾಜ ಸೇವೆಯ ಮೂಲಕ ಜಗತ್ತಿನಲ್ಲಿ ಶಾಶ್ವತ ಪರಿಣಾಮ ಸೃಷ್ಟಿಸುವ ಅಗತ್ಯ ಇದೆ ಎಂದು ತಿಳಿಸಿದರು.



ತದ ನಂತರದಲ್ಲಿ 2026-27ನೇ ಸಾಲಿನ ರೋಟರಿ ಇಂಟರ್‌ನ್ಯಾಷನಲ್ ಅಧ್ಯಕ್ಷರ ಧ್ಯೇಯ ಘೋಷ **Create Lasting Impact** ಅನ್ನು ಅನಾವರಣ ಗೊಳಿಸಲಾಯಿತು.



ರೊ. ಡಾ॥ ರಮೇಶ್‌ರವರಿಗೆ **Know Your Rotary Book** ನೀಡಲಾಯಿತು. ಇದೇ ಸಂದರ್ಭದಲ್ಲಿ ಕ್ಲಬ್ಬಿಗೆ 3 ನೂತನ ಸದಸ್ಯರನ್ನು ಸೇರ್ಪಡೆಗೊಳಿಸಲಾಯಿತು.

ಮೂರು ಶ್ರವಣ ಸಾಧನ ವಿತರಣೆ, ಎರಡು ವ್ಹೀಲ್‌ಚೇರ್ ವಿತರಣೆ ಹಾಗೂ ಸಾಂಕೇತಿಕವಾಗಿ ಶಿವಮೊಗ್ಗ ದುರ್ಗಿಗುಡಿ ಇಂಟರ‍್ಯಾಕ್ಟ್ ಕ್ಲಬ್‌ನ ಇಂಗ್ಲೀಷ್ ಮಾಧ್ಯಮ ಪ್ರೌಢಶಾಲೆಯ ಎಸ್.ಎಸ್.ಎಲ್.ಸಿ. ಮೂರು ವಿದ್ಯಾರ್ಥಿಗಳಿಗೆ







ಪ್ರತಿಭಾ ಪುರಸ್ಕಾರ ನೀಡಲಾಯಿತು.

ಇದೇ ಸಂದರ್ಭದಲ್ಲಿ ಮೂವರು ಹೊಸ ಸದಸ್ಯರುಗಳ









ಸೇರ್ಪಡೆಗೊಳಿಸಲಾಯಿತು. 1. ಡಾ॥ ಪರಮೇಶ್ವರ್, ಹೃದ್ರೋಗ ತಜ್ಞರು, ಸಿಮ್ಸ್, ಶಿವಮೊಗ್ಗ, 2. ಡಾ॥ ಮಹೇಶ್ ಮೂರ್ತಿ, ಹೃದ್ರೋಗ ತಜ್ಞರು, ಸಿಮ್ಸ್,



ಶಿವಮೊಗ್ಗ, 3. ಡಾ. ಶರತ್ ಹೆಚ್. ಮರಿಯಪ್ಪ, ಅಸೋಸಿಯೇಟ್ ಪ್ರೊಫೇಸರ್,



ಡಿಪಾರ್ಟ್‌ಮೆಂಟ್ ಆಫ್. ಇಸಿಇ, ಜೆಎನ್‌ಎನ್‌ಸಿಇ, ಶಿವಮೊಗ್ಗ

ಜೋನಲ್ ಲೆಫ್ಟಿನೆಂಟ್ ರೊ. ಎನ್.ವಿ. ಭಟ್‌ರಿಂದ ಆರ್.ಐ. ಪ್ರೆಸಿಡೆಂಟ್‌ರ ಪೋಡಿಯಂ ಬ್ಯಾನರ್‌ನ ಅನಾವರಣ. ನಂತರದಲ್ಲಿ ಅಸಿಸ್ಟೆಂಟ್ ಗವರ್ನರ್ ರೊ. ತೀರ್ಥಯ್ಯ ಇವರಿಂದ ಕ್ಲಬ್‌ನ 2026-27ನೇ ಸಾಲಿಗೆ ವಿಶೇಷ ಕ್ಲಬ್ ಬುಲೆಟಿನ್ ಮಿಡ್‌ಟೌನ್ ನ್ಯೂಸ್‌ನ್ನು ಬಿಡುಗಡೆಗೊಳಿಸಲಾಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪಿಡಿಜಿ ರೊ. ಡಾ॥ ಪಿ. ನಾರಾಯಣ್‌ರವರು ತಮ್ಮ ಅತಿಥಿ ಭಾಷಣದಲ್ಲಿ ನಿಸ್ವಾರ್ಥ ಸೇವೆಯು ಸಮಾಜದಲ್ಲಿ ಸಂತೋಷ, ಆತ್ಮತೃಪ್ತಿ ಮತ್ತು ಸಕಾರಾತ್ಮಕ ಬದಲಾವಣೆಯನ್ನು ಉಂಟುಮಾಡುತ್ತದೆ. ಇದರಿಂದ ಸದೃಢ ಹಾಗೂ ಆರೋಗ್ಯ ಪೂರ್ಣ ಸಮಾಜವನ್ನು ನಿರ್ಮಿಸಲು ಸಾಧ್ಯ ಎಂಬ ಸಂದೇಶವನ್ನು ನೀಡಿದರು.

ಪದಗ್ರಹಣಾಧಿಕಾರಿಯಾಗಿ ಆಗಮಿಸಿದ್ದ ಡಿಜಿಇ ರೊ. ವಸಂತ್ ಹೋಬ್ಳಿದರ್ ಇವರು ತಮ್ಮ ಭಾಷಣದಲ್ಲಿ 2026-27ನೇ ನೂತನ ಅಧ್ಯಕ್ಷರಿಗೂ ಹಾಗೂ ಅವರ ಸ್ಪಂದನ ತಂಡದವರಿಗೆ ತಮ್ಮ ಜವಾಬ್ದಾರಿಯುತ ಕಾರ್ಯಕ್ರಮಗಳನ್ನು ಈ ವರ್ಷದಲ್ಲಿ ಯಶಸ್ವಿಯಾಗಿ ರೂಪಿಸುವಂತೆ ತಿಳಿಸಿ ಎಲ್ಲರಿಗೂ ಶುಭಾಷಯ ಕೋರಿದರು.

ಕೊನೆಯಲ್ಲಿ ಸಭೆಯ ನೂತನ ಕಾರ್ಯದರ್ಶಿ ರೊ. ಉಜ್ವಲ ಬಿ.ಆರ್. ರವರು ವಂದನಾರ್ಪಣೆ ನಡೆಸಿದರು. ಈ ಎಲ್ಲಾ ಕಾರ್ಯಕ್ರದ ಸುಂದರ ನಿರೂಪಣೆಯನ್ನು ರೊ. ವೀಣಾ ವಿಶ್ವನಾಥ್ ಹಾಗೂ ರೊ. ಡಾ॥ ಜೀನತ್ ಅಂಬರೀನ್ ನಡೆಸಿಕೊಟ್ಟರು.

ಬಾಳೆ ಎಲೆ ಭೋಜನ ಏರ್ಪಡಿಸಲಾಗಿತ್ತು. ಶ್ರೀ ಪ್ರಹ್ಲಾದ್ ದೀಕ್ಷಿತ್ ತಂಡದವರ ಸುಮಧುರ ಗಾಯನವು ಎಲ್ಲರ ಮನಸ್ಸನ್ನು ಸೂರೆಗೊಂಡಿತು. ❏

## TEAM SPANDANA



Rotary Midtown Club Website QR code and Link https://rcshimogamidtown.rotary.org

### THE 4 WAY TEST

of the things we think, say or do :

1. Is it the **TRUTH?**
2. Is it **FAIR** to all concerned?
3. Will it build **GOODWILL** and **BETTER FRIENDSHIPS**?
4. Will it be **BENEFICIAL** to all concerned?

Donate Eyes and Give Sight

Donate Blood and Save Lives



ದಿನಾಂಕ 6-7-2027ರ ಸೋಮವಾರದಂದು ನಮ್ಮ ಕ್ಲಬ್‌ನ ವತಿಯಿಂದ ಮಕ್ಕಳಿಗೆ ಹೆಚ್ಚಿನ ಪೌಷ್ಠಿಕಾಂಶದ ಆಹಾರವನ್ನು ಸಿಮ್ಸ್‌ನ ನ್ಯೂಟ್ರೀಷನ್ ರಿಹ್ಯಾಬಿಲಿಟೇಷನ್ ಸೆಂಟರ್‌ನ ಮಕ್ಕಳಿಗೆ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ರೊ. ಶ್ರೀಧರ ಎಸ್, ಸಮುದಾಯ ಸೇವಾ ನಿರ್ದೇಶಕರಾದ ರೊ. ಆರ್.ಎನ್. ಮಂಜುನಾಥ್, ವೃತ್ತಿ ಸೇವಾ ನಿರ್ದೇಶಕರಾದ ರೊ. ಅಮರ್‌ನಾಥ್, ರೊ. ಉಮಾ ಅಮರ್ ಹಾಗೂ ರೊ. ಸಿದ್ದೇಜಿ ಇವರುಗಳು ಉಪಸ್ಥಿತರಿದ್ದರು.